
# ಯುವ ವೇದಿಕೆ




## ಎಲ್ಲ ಬೆಳವಣಿಗೆಯ ಕೇಂದ್ರ ಮಾನವ

ಆರ್ಥಿಕ ಬೆಳವಣಿಗೆ, ರಾಜಕೀಯ ಬೆಳವಣಿಗೆ, ಗ್ರಾಮೋದ್ಧಾರ, ನಗರೋದ್ಧಾರ, ಶೈಕ್ಷಣಿಕ ಬೆಳವಣಿಗೆ, ಕೈಗಾರಿಕಾ ಬೆಳವಣಿಗೆ ಮುಂತಾದುವುಗಳ ಬಗ್ಗೆ ನಾವು ಬಹಳಷ್ಟು ಚರ್ಚೆ ಮಾಡುತ್ತೇವೆ, ಚರ್ಚಾಕೂಟಗಳನ್ನು ಏರ್ಪಡಿಸುತ್ತೇವೆ, ಕಾರ್ಯಾಗಾರಗಳನ್ನು ಏರ್ಪಡಿಸುತ್ತೇವೆ, ಇವಕ್ಕಾಗಿ ಲೆಕ್ಕವಿಲ್ಲದಷ್ಟು ಹಣವನ್ನು ವಿನಿಯೋಗಿಸುತ್ತೇವೆ. ಆದರೆ ಮಾನವನ ವ್ಯಕ್ತಿತ್ವದ ಬೆಳವಣಿಗೆಯ ಬಗ್ಗೆ ಏನಾದರೂ ಕಾರ್ಯಕ್ರಮಗಳನ್ನು ನಡೆಸುವುದು ಬಹಳ ಅಪರೂಪ. **ಎಲ್ಲ ಬೆಳವಣಿಗೆಯ ಕೇಂದ್ರವೂ ಮಾನವನೆ, ಅವನಿಗಾಗಿಯೇ ಎಲ್ಲ ಬೆಳವಣಿಗೆಯೂ ಇರುವುದು.** ಆದರೆ ಅವನನ್ನೇ ಕಡೆಗಣಿಸಿ ಬೇರೆಲ್ಲ ಬೆಳವಣಿಗೆಯ ಕಡೆ ನಮ್ಮ ಎಲ್ಲ ಗಮನವನ್ನೂ ಹರಿಸುತ್ತೇವೆ. ಮಾನವನ ಅಭಿವೃದ್ಧಿಯಾಗದೆ, ಅವನ ವ್ಯಕ್ತಿತ್ವದಲ್ಲಿ ರಚನಾತ್ಮಕ ಬೆಳವಣಿಗೆ ಉಂಟಾಗದೆ ಬೇರೆ ಎಲ್ಲ ಬೆಳವಣಿಗೆಗಳೂ ನಿಷ್ಫಲವಾಗುತ್ತವೆ. ಇದು ಹೇಗೆಂದರೆ, ಒಬ್ಬ ರೋಗಿ ಇರುತ್ತಾನೆ; ಮೊದಲು ಅವನ ರೋಗವನ್ನು ಗುಣಪಡಿಸಲು ಪ್ರಯತ್ನಿಸದೆ, ಅವನಿಗಾಗಿ ಒಂದು ಭವ್ಯವಾದ ಮನೆಯನ್ನು ಕಟ್ಟಿಸಲು ತೊಡಗಿದಂತೆ. ಆ ಮನೆ ಕಟ್ಟುವ ಕಾರ್ಯ ಮುಗಿಯುವ ಹೊತ್ತಿಗೆ ಬಹುಶಃ ರೋಗಿಯೇ ಅಸುನೀಗಬಹುದು, ಆ ಮನೆ ಅವನ ಗೋರಿಯಾಗಿ ಪರಿಣಮಿಸಬಹುದು. **ಮಾನವನ ವ್ಯಕ್ತಿತ್ವ ಬೆಳವಣಿಗೆಗೆ, ಅವನ ನೈತಿಕ ಮತ್ತು ಆಧ್ಯಾತ್ಮಿಕ ಉನ್ನತಿಗೆ ಆದ್ಯತೆ ನೀಡಬೇಕು. ಆಗ ಉಳಿದ ಬೆಳವಣಿಗೆಗಳೆಲ್ಲ ಸಾರ್ಥಕವಾಗುತ್ತವೆ.**

> **ತನ್ನ ವ್ಯಕ್ತಿವೈಶಿಷ್ಟ್ಯಕ್ಕೆ ಅನುಗುಣವಾಗಿ ಹೊರಗಿನ ಅಂಶಗಳನ್ನು ಸ್ವೀಕರಿಸುತ್ತ, ಸಾಧ್ಯವಾದುದನ್ನು ಮಾರ್ಪಡಿಸುತ್ತ ಬೆಳೆಯುವುದೇ ವ್ಯಕ್ತಿತ್ವದ ಬೆಳವಣಿಗೆ—ದೇಹವು ತನಗೆ ಬೇಕಾದುದನ್ನು ಸ್ವೀಕರಿಸಿ, ಮಾರ್ಪಡಿಸಿ ಅರಗಿಸಿಕೊಂಡು ಬೆಳೆಯುವಂತೆ.**

## ಪ್ರತಿಯೊಬ್ಬನೂ ವಿಶಿಷ್ಟ ವ್ಯಕ್ತಿ

ವ್ಯಕ್ತಿತ್ವದ ಬೆಳವಣಿಗೆಯನ್ನು ಕುರಿತು ಚಿಂತಿಸುವಾಗ ಪ್ರತಿಯೊಬ್ಬನ ವ್ಯಕ್ತಿವೈಶಿಷ್ಟ್ಯವನ್ನು ನಾವು ಕಡೆಗಣಿಸಬಾರದು. ನಾವು ಸಾಮಾನ್ಯವಾಗಿ ಕೆಲವು ವ್ಯಕ್ತಿಗಳ ಬಗ್ಗೆ ಮಾತನಾಡುವಾಗ 'ಇವನು ಅದ್ಭುತ ವ್ಯಕ್ತಿತ್ವವುಳ್ಳವನು', 'ಇವನಿಗೆ ವರ್ಚಸ್ವೀ ವ್ಯಕ್ತಿತ್ವವಿದೆ' ಎಂದೆಲ್ಲ ಹೇಳುತ್ತೇವೆ. ಆದರೆ ಈ ಹೇಳಿಕೆಗಳು ವ್ಯಕ್ತಿಯ ಬಾಹ್ಯ ಲಕ್ಷಣಗಳನ್ನು ಪ್ರತಿಬಿಂಬಿಸಬಹುದೇ ಹೊರತು ಅವನ ನಿಜವಾದ ವ್ಯಕ್ತಿತ್ವಕ್ಕೆ ಸಂಬಂಧಿಸದೇ ಇರಬಹುದು. ಜನರು ಆಯಾಯ ಕಾರ್ಯಕ್ಷೇತ್ರದಲ್ಲಿ ಕೆಲಸ ಮಾಡುವಾಗ ಅದಕ್ಕೆ ಸಂಬಂಧಪಟ್ಟ ವ್ಯಕ್ತಿತ್ವವನ್ನು ಬೆಳಸಿಕೊಳ್ಳುತ್ತಾರೆ. ರಾಜಕೀಯದಲ್ಲಿರುವವನ ಮಾತು ಕೃತಿ ಆಲೋಚನೆಗಳೆಲ್ಲ ರಾಜಕೀಯದ ಬಣ್ಣದಿಂದ ಕೂಡಿರುತ್ತದೆ. ಹಾಗೆಯೇ ವ್ಯಾಪಾರದಲ್ಲಿ ತೊಡಗಿರುವವನ ವ್ಯಕ್ತಿತ್ವ ವ್ಯಾಪಾರದ ಬಣ್ಣದಿಂದ ಕೂಡಿರುತ್ತದೆ. ಆದರೆ ಇವು ವ್ಯಕ್ತಿಯ ನಿಜವಾದ ವ್ಯಕ್ತಿತ್ವವನ್ನು ಸೂಚಿಸುವುದಿಲ್ಲ.

ಇವೆಲ್ಲವೂ ವ್ಯಕ್ತಿಯ ಹೊರ ಪದರಗಳು. ಇವುಗಳಲ್ಲದೆ ಪ್ರತಿಯೊಬ್ಬನೂ ತನ್ನದೇ ಆದ ವ್ಯಕ್ತಿವೈಶಿಷ್ಟ್ಯವನ್ನು ಪಡೆದಿರುತ್ತಾನೆ. ಆ ವೈಶಿಷ್ಟ್ಯತೆ ಏನು ಎಂದು ನಿರ್ದಿಷ್ಟವಾಗಿ ಸೂಚಿಸುವುದು ಕಷ್ಟವಾಗುತ್ತದೆ, ಏಕೆಂದರೆ ಆ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಹಲವಾರು ಅಂಶಗಳು ಸೇರಿಕೊಂಡಿರುತ್ತವೆ. ಆದರೆ ಮುಖ್ಯವಾದ ಅಂಶವೇನೆಂದರೆ, ಪ್ರತಿಯೊಬ್ಬನೂ ತನ್ನ ವೈಯಕ್ತಿಕತೆಯನ್ನೂ ವ್ಯಕ್ತಿವೈಶಿಷ್ಟ್ಯವನ್ನೂ ಉಳಿಸಿಕೊಳ್ಳುವುದು. ಕೆಲವರು ಆಲೋಚನಾಪರರು, ಕೆಲವರು ತುಂಬ ಕ್ರಿಯಾಶೀಲರು, ಕೆಲವರದು ಶಾಂತ ಪ್ರವೃತ್ತಿ, ಕೆಲವರಿಗೆ ತುಂಬ ಮಾತನಾಡುವ ಸ್ವಭಾವ, ಕೆಲವರು ಸೇವಾಮನೋಭಾವದವರು, ಮತ್ತೆ ಕೆಲವರು ಧ್ಯಾನಾಸಕ್ತರು—ಹೀಗೆ ವ್ಯಕ್ತಿವೈವಿಧ್ಯವನ್ನು ನಾವು ಕಾಣುತ್ತೇವೆ. ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಈ ವ್ಯಕ್ತಿ ವೈಶಿಷ್ಟ್ಯಗಳನ್ನು ಬಲಿಕೊಡುವ ಆವಶ್ಯಕತೆಯಿಲ್ಲ.

ಸಾಮಾನ್ಯವಾಗಿ ತಂದೆತಾಯಿಯರು ಮತ್ತು ಹಿರಿಯರು

ತಮ್ಮದೇ ಜೀವನ ಮತ್ತು ಆಲೋಚನಾ ವಿಧಾನವನ್ನು ಮಕ್ಕಳ ಮೇಲೆ ಹೇರಲು ಪ್ರಯತ್ನಿಸುತ್ತಾರೆ. ಇದರಿಂದ ಮಕ್ಕಳ ಬೆಳವಣಿಗೆ ಕುಂಠಿತವಾಗುತ್ತದೆ. ಸ್ವಾಮಿ ವಿವೇಕಾನಂದರು ಹೇಳುವಂತೆ ಪ್ರತಿಯೊಬ್ಬನೂ ತನ್ನದೇ ಬೆಳವಣಿಗೆಯ ನಿಯಮವನ್ನು ಅನುಸರಿಸಿ ಬೆಳೆಯಬೇಕು. ಯಾರು ತಮ್ಮ ವೈಯಕ್ತಿಕತೆಗೆ ಗೌರವವನ್ನು ನೀಡುತ್ತಾರೊ, ಅವರು ಇತರರ ವೈಯಕ್ತಿಕತೆಗೂ ಗೌರವವನ್ನು ನೀಡುತ್ತಾರೆ. ಸ್ವಂತ ವ್ಯಕ್ತಿತ್ವವಿಲ್ಲದ, ಇತರರಿಂದ ಎರವಲು ಪಡೆದ ವ್ಯಕ್ತಿತ್ವವುಳ್ಳವರು (*borrowed personality*) ಇತರರೂ ತಮ್ಮಂತೆಯೇ ಆಗಬೇಕೆಂದು ಬಯಸುತ್ತಾರೆ.

ಈ ವೈಯಕ್ತಿಕತೆ ಮತ್ತು ಸ್ವಾರ್ಥತೆ ಒಂದೇ ಅಲ್ಲ. ಹೊರಗಿನ ವ್ಯಕ್ತಿಗಳು, ವಸ್ತುಗಳು, ಸ್ಥಾನಮಾನಗಳು ಇವುಗಳೊಡನೆ ಉಂಟಾಗುವ ತಾದಾತ್ಮ್ಯದ ಪರಿಣಾಮವೇ ಸ್ವಾರ್ಥತೆ. ಇಲ್ಲಿ ಬಾಹ್ಯಾಲಂಬನೆಯಿದೆ. ವೈಯಕ್ತಿಕತೆ ಇದಕ್ಕೆ ವಿರುದ್ಧವಾದುದು. ಇಲ್ಲಿ ಬಾಹ್ಯಾಲಂಬನೆಯಿಲ್ಲದೆ ವ್ಯಕ್ತಿ ತಾನೇ ತಾನಾಗಿ ಇರುತ್ತಾನೆ. ತಾನೇ ತಾನಾಗಿ ಇರುವ ಸಾಮರ್ಥ್ಯ ಅನೇಕರಲ್ಲಿ ಇರುವುದಿಲ್ಲ. 'ತನ್ನ ಸ್ವಾಭಾವಿಕವಾದ ವೈಯಕ್ತಿಕತೆಯಲ್ಲಿ ನೆಲೆನಿಲ್ಲುವ ಧೈರ್ಯ ಬಹಳ ಅಪರೂಪವಾದುದು..... ತಿಳಿದೊ ತಿಳಿಯದೆಯೊ ನಾವೆಲ್ಲರೂ ಈ ಜೀವನದಲ್ಲಿ ನಟರು—ಜನರಿಗೆ ಸಮ್ಮತವಾದ, ಮೆಚ್ಚಿಗೆಯಾಗುವ ಪಾತ್ರಧಾರಿಗಳಾಗಿ ನಾವು ನಟಿಸುತ್ತೇವೆ.' (ಲಿನ್ ಯುಟಾಂಗ್, *Importance of Living*, p.99)

### ಅನುಕರಣೆ ಕೆಟ್ಟದ್ದು

ನಮ್ಮಲ್ಲಿ ಅಂಧಾನುಕರಣೆಯ ಪ್ರವೃತ್ತಿ ಇದೆ. ಇತರರ ಜೀವನ ವಿಧಾನವನ್ನು, ವರ್ತನೆಯನ್ನು, ಭಾವನೆಗಳನ್ನು ನಾವು ಅನುಕರಿಸುತ್ತೇವೆ, ಮತ್ತು ಇದನ್ನು ಆಧುನಿಕತೆ ಎಂದು ಕರೆಯುತ್ತೇವೆ. ಈ ರೀತಿಯ ಅನುಕರಣೆಯ ಮೂಲಕ ಒಂದು ಕೃತಕವಾದ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತೇವೆ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: 'ಅನುಕರಣೆ ನಾಗರಿಕತೆಯಲ್ಲ..... ಹೇಡಿಯಂತೆ ಅನುಕರಿಸುವುದರಿಂದ ಪ್ರಗತಿ ಹೊಂದಲಾಗುವುದಿಲ್ಲ. ಇದು ಹೀನ ಅವನತಿಯ ಚಿಹ್ನೆ.' (ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ. ೩, ಪು.೨೪೧) ಆದರೆ ಇದರರ್ಥ ನಾವು ಇತರರಿಂದ ಏನನ್ನೂ ಕಲಿಯಬಾರದೆಂದಲ್ಲ. ಕಲಿಕೆ ಮತ್ತು ಅನುಕರಣೆ ಇವೆರಡಕ್ಕೂ ಅಜಗಜಾಂತರ. ಸ್ವಾಮೀಜಿ ಮುಂದುವರಿಸಿ ಹೇಳುತ್ತಾರೆ: 'ನಾವು ಇತರರಿಂದ ಕಲಿಯಬೇಕಾದುದು ಬಹಳವಿದೆ. ಕಲಿಯಲು ಇಷ್ಟಪಡದವನು ಆಗಲೇ ಸತ್ತಂತೆ. ಇತರರಿಂದ ಒಳ್ಳೆಯದೆಲ್ಲವನ್ನೂ ಕಲಿಯಿರಿ. ಆದರೆ ಅದನ್ನು ಸ್ವೀಕರಿಸಿ ನಿಮ್ಮದೇ ರೀತಿಯಲ್ಲಿ ಅರಗಿಸಿಕೊಳ್ಳಿ. ಇತರರಾಗಬೇಡಿ... ಬೀಜವನ್ನು ನೆಲದಲ್ಲಿ ಬಿತ್ತಿದ್ದಾಗಿದೆ. ಮಣ್ಣು, ಗಾಳಿ, ನೀರು ಎಲ್ಲ ಅಲ್ಲಿವೆ. ಬೀಜವು ನೆಲ, ಗಾಳಿ, ನೀರು ಆಗುವುದೇನು? ಇಲ್ಲ, ಅದು ಗಿಡವಾಗುತ್ತದೆ. ತನ್ನದೇ ಬೆಳವಣಿಗೆಯ ನಿಯಮಕ್ಕೆ ಅನುಗುಣವಾಗಿ ಗಾಳಿ, ನೆಲ, ನೀರುಗಳನ್ನು ತನ್ನ ಸ್ವಭಾವವಾಗಿ ಪರಿವರ್ತಿಸಿಕೊಂಡು ಗಿಡವಾಗಿ ಬೆಳೆಯುತ್ತದೆ.'

(ಕೃ.ಶ್ರೇ.೩.೨೪೧)

### ವ್ಯಕ್ತಿತ್ವವನ್ನು ರೂಪಿಸುವ ಅಂಶಗಳು:

ಒಂದು ವ್ಯಕ್ತಿತ್ವವನ್ನು ರೂಪಿಸುವಲ್ಲಿ ಹಲವಾರು ಅಂಶಗಳು ಕೆಲಸ ಮಾಡುತ್ತವೆ —ಕೆಲವು ಸಾಧಕವಾಗಿಯೂ, ಕೆಲವು ಬಾಧಕವಾಗಿಯೂ. ಇವುಗಳನ್ನು ಒಟ್ಟಾರೆ ಈ ಕೆಳಗಿನಂತೆ ವರ್ಗೀಕರಿಸಬಹುದು: ಸಂಸ್ಕಾರಗಳು, ವಾತಾವರಣ, ಕೆಲಸ, ಶಿಕ್ಷಣ, ಅನುಭವಗಳು ಮತ್ತು ಜೀವನದ ಆದರ್ಶ.

**ಸಂಸ್ಕಾರಗಳು:** ನಾವೆಲ್ಲರೂ ಕೆಲವು ಸಂಸ್ಕಾರಗಳೊಂದಿಗೆ ಹುಟ್ಟಿ ಬರುತ್ತೇವೆ. ಇವು ಪೂರ್ವಜನ್ಮದ ಸಂಸ್ಕಾರಗಳಾಗಿರಬಹುದು ಅಥವಾ ಆನುವಂಶಿಕವಾಗಿ ಬಂದವುಗಳಾಗಿರಬಹುದು. ಇವು ನಾವು ಹಿಂದೆ ಮಾಡಿದ ಕರ್ಮಗಳ ಮತ್ತು ಆಲೋಚನೆಗಳ ಗುರುತುಗಳು. ಇವು ನಮ್ಮ ಮನಸ್ಸಿನಲ್ಲಿ ಸುಪ್ತಾವಸ್ಥೆಯಲ್ಲಿ ಇರುತ್ತವೆ. ವ್ಯಕ್ತಿ ಶೈಶವದಿಂದ ಪ್ರೌಢಾವಸ್ಥೆಗೆ ಬೆಳೆಯುತ್ತಿದ್ದಂತೆ ಈ ಸಂಸ್ಕಾರಗಳು ಕ್ರಮೇಣ ಅಭಿವ್ಯಕ್ತವಾಗುತ್ತಾ ಬರುತ್ತವೆ ಮತ್ತು ಅವನ ಮಾತು ಕೃತಿ ಆಲೋಚನೆಗಳ ಮೇಲೆ ಪ್ರಭಾವ ಬೀರಿ ಅವನ ವ್ಯಕ್ತಿತ್ವಕ್ಕೆ ತಮ್ಮದೇ ಆದ ರೂಪವನ್ನು ಕೊಡುತ್ತವೆ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: **'ಈ ಕ್ಷಣದಲ್ಲಿ ನಾನೇನಾಗಿದ್ದೇನೆಯೊ ಅದು ನನ್ನ ಪೂರ್ವಜನ್ಮದ ಸಮಸ್ತ ಸಂಸ್ಕಾರಗಳ ಮೊತ್ತದ ಫಲ.** ನಿಜವಾಗಿಯೂ ಶೀಲ ಎಂದರೆ ಇದೇ. ಆದುದರಿಂದ ಪ್ರತಿಯೊಬ್ಬನ ಶೀಲವೂ ಆತನ ಹಿಂದಿನ ಕರ್ಮಫಲಗಳ ಮೊತ್ತದಿಂದ ನಿರ್ಧಾರಿತವಾಗುತ್ತದೆ. ಈ ಸಂಸ್ಕಾರಗಳು ಒಳ್ಳೆಯದಾಗಿದ್ದಲ್ಲಿ ಶೀಲವು ಒಳ್ಳೆಯದಾಗಿರುತ್ತದೆ, ಕೆಟ್ಟದಾಗಿದ್ದಲ್ಲಿ ಶೀಲವು ಕೆಟ್ಟದ್ದಾಗಿರುತ್ತದೆ.'

(ಕೃ. ಶ್ರೇ. ಸಂ.೧, ಪು.೫೪)

ನಿನಗೆ ಮುಳ್ಳು ಚುಚ್ಚಿದರೆ ನೀನೇ ಅದನ್ನು ನೆಟ್ಟವನು. ನೀನು ಸ್ಯಾಟಿನ್ ಮತ್ತು ರೇಷ್ಮೆ ಉಡುಪನ್ನು ಧರಿಸಿದ್ದರೆ ನೀನೆ ಅದನ್ನು ಹೆಣೆದವನು.

—ಜಲಾಲುಲ್ ದಿನ್ ರೂಮಿ

ಇದು ಏನನ್ನು ಸೂಚಿಸುತ್ತದೆ? ನನ್ನ ಈಗಿನ ಸ್ಥಿತಿಯು ಹಿಂದಿನ ಕರ್ಮಗಳನ್ನು ಅವಲಂಬಿಸಿದ್ದರೆ, ಮುಂದಿನದು ಈಗಿನದನ್ನು ಅವಲಂಬಿಸಿರುತ್ತದೆ. ಆದ್ದರಿಂದ ಮುಂದಿನ ನನ್ನ ಭವಿಷ್ಯವನ್ನು ರೂಪಿಸಿಕೊಳ್ಳುವ ಕೀಲಿಕೈ ನನ್ನ ಕೈಯಲ್ಲಿದೆ. ಇಚ್ಛಾಪೂರ್ವಕವಾಗಿ ನನ್ನ ಮಾತು ಕೃತಿ ಆಲೋಚನೆಗಳನ್ನು ನಿಗ್ರಹಿಸಿ ಅವನ್ನು ಸನ್ಮಾರ್ಗದಲ್ಲಿ ತೊಡಗಿಸುವುದು ಆವಶ್ಯಕ. **'ಇಚ್ಛಾಶಕ್ತಿ—ಸ್ವಯಮುತ್ಪಾದಕ ಶಕ್ತಿ— ಇದೇ ಶ್ರೇಷ್ಠ ಚಾರಿತ್ರ್ಯದ ಕೇಂದ್ರ ಬಿಂದು,'** ಎಂದು ಸ್ಯಾಮುಯಲ್ ಸ್ಮೈಲ್ಸ್ ಹೇಳುತ್ತಾರೆ. (*Character*, p.1)

**ವಾತಾವರಣ** : ವಾತಾವರಣವೂ ಮಾನವನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ಶ್ರೇಷ್ಠ ಚಿಂತಕರಾದ ವಿಲ್ ಡ್ಯೂರಾಂಟ್, **'ಮಾನವನ ಚಿಂತನೆ ಅವನದಲ್ಲ, ಅದು ಅವನು ಯಾವ ಸಾಮಾಜಿಕ ವರ್ಗದ ಭಾಗವಾಗಿರುವನೊ ಅದರ ಪ್ರತಿಫಲ.**(*Pleasures of Philosophy* p.282) ಎನ್ನುವಷ್ಟರ

ಮಟ್ಟಿಗೆ ಹೋಗುತ್ತಾರೆ. ಈ ವಾತಾವರಣದಲ್ಲಿ ಕೌಟುಂಬಿಕ ಪರಿಸರವೂ ಸೇರುತ್ತದೆ. ಮಕ್ಕಳ ಮೇಲೆ ತಂದೆತಾಯಿಯರ ಪ್ರಭಾವ ಎಷ್ಟರಮಟ್ಟಿನದು ಎಂಬುದು ಎಲ್ಲರಿಗೂ ತಿಳಿದ ವಿಷಯ. ಜಾರ್ಜ್ ಹರ್ಬರ್ಟ್ ಹೇಳುವಂತೆ, **'ಓರ್ವ ಒಳ್ಳೆಯ ತಾಯಿ ನೂರು ಜನ ಉಪಾಧ್ಯಾಯರಿಗೆ ಸಮಾನ.'** ಪ್ರಸಿದ್ಧ ಮನೋವೈದ್ಯ ರಾದ ಸಿ.ಇ. ಬಾರ್ಕರ್ ಅವರ ಪ್ರಕಾರ, 'ತಾಯ್ತನದ ಅರಿವುಳ್ಳ ತಾಯಂದಿರಿಗೆ ಪ್ರಪಂಚವನ್ನು ಸುವ್ಯವಸ್ಥೆಗೆ ತರುವ ಸಾಮರ್ಥ್ಯವಿದೆ. ಉತ್ತಮ ತಾಯಿಯ ಆರೈಕೆ ಸ್ಥಿರವೂ ಶಾಂತಿಯುತವೂ ಆದ ಒಂದು ನಾಗರಿಕತೆಯನ್ನು ಕಟ್ಟುವಲ್ಲಿ ನಂಬಲಸಾಧ್ಯವಾಗುವಷ್ಟು ಕೊಡುಗೆಯನ್ನು ನೀಡುತ್ತದೆ.'

ವಾತಾವರಣದ ಪ್ರಭಾವಕ್ಕೆ ಇಷ್ಟೊಂದು ಒತ್ತನ್ನು ನೀಡಿದ ಮಾತ್ರಕ್ಕೆ ಸಂಸ್ಕಾರಗಳ ಪ್ರಾಮುಖ್ಯವನ್ನು ಕಡೆಗಣಿಸಿದಂತಾಗಲಿಲ್ಲ. ಉತ್ತಮ ವಾತಾವರಣದ ಮೂಲಕ ವ್ಯಕ್ತಿಯ ಸತ್ಸಂಸ್ಕಾರಗಳು ಬಲಯುತವಾಗುತ್ತವೆ ಮತ್ತು ದುಷ್ಟ ಸಂಸ್ಕಾರಗಳು ಕ್ರಮೇಣ ಕ್ಷೀಣಿಸುತ್ತವೆ. ಹೀಗೆಯೆ ಕೆಟ್ಟ ವಾತಾವರಣದಲ್ಲಿ ಇದರ ವಿರುದ್ಧ ಕ್ರಿಯೆ ನಡೆಯುತ್ತದೆ. ಇಷ್ಟೆ ಅಲ್ಲದೆ ವ್ಯಕ್ತಿಯ ಪ್ರತಿಕ್ರಿಯೆಗೆ ಅನುಗುಣವಾಗಿ ವಾತಾವರಣವೇ ಅವನಲ್ಲಿ ಹೊಸ ಸಂಸ್ಕಾರಗಳನ್ನು ಸೃಷ್ಟಿಸುತ್ತದೆ. ಮನೆಯಲ್ಲಿ, ಶಿಕ್ಷಣಸಂಸ್ಥೆಗಳಲ್ಲಿ ಹಾಗೂ ಒಟ್ಟು ಸಮಾಜದಲ್ಲಿ ಉತ್ತಮ ವಾತಾವರಣವನ್ನು ಸೃಷ್ಟಿಸುವುದರ ಪ್ರಾಮುಖ್ಯತೆಯನ್ನು ಇದು ಸೂಚಿಸುತ್ತದೆ.

> **ದುಃಖಕ್ಕೂ ಅರ್ಥವಿದೆ ಎಂದು ತಿಳಿದು ಬಂದಾಗ ಹೇಗೋ ದುಃಖವು ದುಃಖವಾಗಿ ಉಳಿಯುವುದಿಲ್ಲ.**
> **ವಿಕ್ಟರ್ ಇ. ಫ್ರಾಂಕ್ಲ್,**
> ಪ್ರಸಿದ್ಧ ಮನಶ್ಶಾಸ್ತ್ರಜ್ಞ

ಕೆಲಸ: ಆಹಾರದಂತೆ ಕೆಲಸವೂ ಕೂಡ ಜೀವನದ ಒಂದು ಮೂಲಭೂತ ಆವಶ್ಯಕತೆ. ಇಂಗ್ಲಿಷ್ ಕವಿ ಹೆನ್ರಿ ಫ್ರೆಡರಿಕ್ ಅಮೀಲ್ ಹೇಳುವಂತೆ, 'ಕೆಲಸವು ಜೀವನಕ್ಕೆ ಮೆರಗನ್ನು ನೀಡುತ್ತದೆ' (*It is work which gives flavour to life*). ಕೆಲಸವಿಲ್ಲದವನು ಧನ್ಯತೆಯನ್ನು ಪಡೆಯುವುದಿಲ್ಲ (**ಕ್ರಿಯಾವಿಹೀನೋ ನ ಚ ಯಾತಿ ಧನ್ಯತಾಮ್**) ಎಂಬ ಸಂಸ್ಕೃತ ಹೇಳಿಕೆಯೊಂದಿದೆ. ವ್ಯಕ್ತಿಯು ಕೆಲಸದ ಮೂಲಕವೆ ತನ್ನ ಅಂತಃಸಾಮರ್ಥ್ಯವನ್ನು, ಪ್ರತಿಭೆಗಳನ್ನು ಹೊರಗೆ ವ್ಯಕ್ತಪಡಿಸುವುದು ಸಾಧ್ಯ ಮತ್ತು ಅವುಗಳ ಅಭಿವ್ಯಕ್ತಿ ವ್ಯಕ್ತಿತ್ವದ ಬೆಳವಣಿಗೆಗೆ ಅತ್ಯಾವಶ್ಯಕ. ವ್ಯಕ್ತಿಯ ಆಂತರಿಕ ಸಾಮರ್ಥ್ಯ ಮತ್ತು ಪ್ರತಿಭೆಗಳಿಗೆ ಅನುಗುಣವಾದ ಕೆಲಸ ಅವನಿಗೆ ಸಿಕ್ಕಿದರೆ ಅದು ಉತ್ತಮ. ಇಂದಿನ ಸಂಕೀರ್ಣವಾದ ಸಾಮಾಜಿಕ ಪರಿಸ್ಥಿತಿಯಲ್ಲಿ ಇದನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಆದರೂ ಪ್ರತಿಯೊಬ್ಬ ವ್ಯಕ್ತಿಯೂ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ತನ್ನ ಪಾಲಿಗೆ ಬಂದ ಕೆಲಸವನ್ನೇ ತನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ಪರಿವರ್ತಿಸಿಕೊಳ್ಳಬಹುದು ಇಲ್ಲವೇ ಬೇರೆ ಅವಕಾಶಗಳನ್ನು ಉಪಯೋಗಿಸಿಕೊಂಡು ತನ್ನ ಸಾಮರ್ಥ್ಯ ಪ್ರತಿಭೆಗಳನ್ನು ವ್ಯಕ್ತಪಡಿಸಬಹುದು. ಅಂತೂ ಈ ರೀತಿ ವ್ಯಕ್ತಪಡಿಸುವುದು ಅವನ ಮಾನಸಿಕ ಆರೋಗ್ಯಕ್ಕೆ ಆವಶ್ಯಕ. ಎರಿಕ್ ಫ್ರೋಮ್ ಎಂಬ ಮನಶ್ಶಾಸ್ತ್ರಜ್ಞರು ಹೇಳುತ್ತಾರೆ: **'ಪ್ರತಿಯೊಂದು ನರವ್ಯಾಧಿಯೂ ಆಂತರಿಕ ಸಾಮರ್ಥ್ಯ ಮತ್ತು ಅದರ ಅಭಿವ್ಯಕ್ತಿಯನ್ನು ತಡೆಯುವ ಶಕ್ತಿಗಳು ಇವುಗಳ ನಡುವಿನ ಸಂಘರ್ಷದ ಫಲ'** (*Man for Himself*, p.222).

ಶಿಕ್ಷಣ : ವ್ಯಕ್ತಿತ್ವ ನಿರ್ಮಾಣದಲ್ಲಿ ಶಿಕ್ಷಣದ ಪಾತ್ರದ ಬಗ್ಗೆ ಪ್ರತ್ಯೇಕ ಹೇಳಬೇಕಾಗಿಯೇ ಇಲ್ಲ. ಶಿಕ್ಷಣವು ಹಲವಾರು ರೀತಿಯಲ್ಲಿ ವ್ಯಕ್ತಿಯ ಜೀವನವನ್ನು ಬದಲಾಯಿಸುತ್ತದೆ. ಶಿಕ್ಷಣವನ್ನು ಪಡೆದ ವ್ಯಕ್ತಿ—ಅದು ಎಂಥದೇ ಆಗಿರಲಿ —ಮೊದಲಿನಂತೆ ಇರುವುದಿಲ್ಲ—ಅವನು ಉತ್ತಮನೂ ಆಗಬಹುದು, ಅಧಮನೂ ಆಗಬಹುದು. ಶಿಕ್ಷಣವು ವ್ಯಕ್ತಿತ್ವದ ವಿವಿಧ ಪದರಗಳನ್ನು ಸ್ಪರ್ಶಿಸುವುದರ ಮೂಲಕ ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಕಾರಣವಾಗುತ್ತದೆ. ಭೌತಿಕ ಶಿಕ್ಷಣ ವ್ಯಕ್ತಿಯ ದೈಹಿಕ ಬೆಳವಣಿಗೆಗೆ ಅನುವಾಗುತ್ತದೆ; ಬೌದ್ಧಿಕ ಶಿಕ್ಷಣ, ಅಂದರೆ ಭೌತಶಾಸ್ತ್ರವೇ ಮುಂತಾದ ವಿಷಯಗಳನ್ನು ತಿಳಿಯುವುದು, ಬುದ್ಧಿಯ ಬೆಳವಣಿಗೆಗೆ ಸಹಾಯಕವಾಗುತ್ತದೆ; ಕಲಾ ಶಿಕ್ಷಣದಿಂದ ವಿವಿಧ ಪ್ರತಿಭೆಗಳನ್ನು ರೂಢಿಸಿಕೊಳ್ಳುವಂತಾಗುತ್ತದೆ; ವೃತ್ತಿ ಶಿಕ್ಷಣ ಜೀವನೋಪಾಯಕ್ಕೆ ನೆರವಾಗುತ್ತದೆ; ಹಾಗೂ ನೀತಿ ಶಿಕ್ಷಣ ಹೇಗೆ ಬಾಳಬೇಕೆಂಬುದನ್ನು ತೋರಿಸಿಕೊಡುತ್ತದೆ. ಇದು ಶಿಕ್ಷಣದ ಒಂದು ಸಮಗ್ರ ಚಿತ್ರ. ಇಂತಹ ಆದರ್ಶ ಶಿಕ್ಷಣ ಆದರ್ಶ ವ್ಯಕ್ತಿಗಳನ್ನು ನಿರ್ಮಿಸುವುದರಲ್ಲಿ ಸಂದೇಹವಿಲ್ಲ.

ಅನುಭವ: ನಾವು ಜೀವನದಲ್ಲಿ ವಿವಿಧ ಬಗೆಯ ಅನುಭವಗಳನ್ನು ಪಡೆಯುತ್ತೇವೆ. ಅವು ತೃಪ್ತಿಕರವಾಗಿರಬಹುದು ಅಥವಾ ಅತೃಪ್ತಿಕರವಾಗಿರಬಹುದು. ಇವೂ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: 'ಶೀಲ ನಿರ್ಮಾಣದಲ್ಲಿ ಸುಖ-ದುಃಖಗಳೆರಡೂ ಸಮಾನವಾದ ಪಾತ್ರವನ್ನು ವಹಿಸುತ್ತವೆ ಎಂಬುದು ಕಂಡುಬರುತ್ತದೆ. ಹಾಗೆ ನೋಡಿದರೆ ಕೆಲವು ಸಂದರ್ಭಗಳಲ್ಲಿ ಸುಖಕ್ಕಿಂತ ದುಃಖವೇ ದೊಡ್ಡ ಶಿಕ್ಷಕನಾಗಿ ವರ್ತಿಸುತ್ತದೆ. ಜಗತ್ತಿನಲ್ಲಿ ಕಾಣಿಸಿಕೊಂಡಿರುವ ಮಹಾನ್ ವ್ಯಕ್ತಿಗಳಲ್ಲಿ ಅನೇಕ ವೇಳೆ ದುಃಖವೇ ಸುಖಕ್ಕಿಂತಲೂ ಹೆಚ್ಚಾದ ಶಿಕ್ಷಣವನ್ನು ಕೊಟ್ಟು ಬುದ್ಧಿಕಲಿಸಿತೆಂದೂ, ಐಶ್ವರ್ಯಕ್ಕಿಂತಲೂ ದಾರಿದ್ರ್ಯವೇ ಅಧಿಕವಾಗಿ ಕಲಿಸಿತೆಂದೂ, ಮನುಷ್ಯನಲ್ಲಿ ಅಡಗಿರುವ ಅಂತರಾಗ್ನಿಯನ್ನು ಹೊರಗೆಡವಿದುದು ಹೊಗಳಿಕೆ ಅಲ್ಲ, ಪೆಟ್ಟುಗಳು ಎಂದೂ ನಾನು ಧೈರ್ಯವಾಗಿ ಹೇಳುತ್ತೇನೆ.'

(ಕೃ.ಶ್ರೇ.೧.೨೯)

ಆದರೆ ಅನುಭವಗಳಿಂದ ಹೇಗೆ ಪಾಠ ಕಲಿಯಬೇಕೆಂಬುದು ನಮಗೆ ತಿಳಿದಿರಬೇಕು. ಈ ರೀತಿ ಕಲಿಯುವುದರ ಮೂಲಕ ನಾವು ವಿವೇಕಿಗಳಾಗುತ್ತೇವೆ. ಈ ವಿಷಯಕ್ಕೆ ಸಂಬಂಧಿಸಿದಂತೆ—ಉತ್ತಮ, ಮಧ್ಯಮ ಮತ್ತು ಅಧಮ ಎಂದು ಮೂರು ಬಗೆಯ ಜನರಿರುವರೆಂದು ಸಂಪ್ರದಾಯ ಹೇಳುತ್ತದೆ. ಇತರರ ಅನುಭವದಿಂದ ಕಲಿಯುವವನು ಉತ್ತಮ. ಅತಿಯಾದ ಇಂದ್ರಿಯಸುಖಗಳಿಂದ ಇತರರು

ದೈಹಿಕವಾಗಿಯೂ ಮಾನಸಿಕವಾಗಿಯೂ ವ್ಯಥೆಪಡುವುದನ್ನು ನೋಡಿ ಆತ್ಮಸಂಯಮವನ್ನು ಅಭ್ಯಾಸ ಮಾಡುವವನು ಉತ್ತಮ. ತಾನು ದುಃಖವನ್ನು ಅನುಭವಿಸಿ ಅನಂತರ ಆತ್ಮಸಂಯಮ ಮಾಡುವವನು ಮಧ್ಯಮ. ತಾನು ಅನುಭವಿಸಿಯೂ ಪಾಠವನ್ನು ಕಲಿಯದೆ ಇಂದ್ರಿಯ ಲೋಲುಪತೆಯಲ್ಲಿ ಮಗ್ನನಾಗುವವನು ಅಧಮ. ನಾವು ಕೊನೆಯ ಪಕ್ಷ ಮಧ್ಯಮ ವರ್ಗಕ್ಕಾದರೂ ಸೇರಿದವರಾಗಿರೋಣ.

**ಆದರ್ಶ**: ಜೀವನದಲ್ಲಿ ನಾವು ಯಾವ ಆದರ್ಶವನ್ನು ಇಟ್ಟು ಕೊಳ್ಳುತ್ತೇವೆ ಎಂಬುದು ಅತ್ಯಂತ ಮುಖ್ಯ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: 'ಆದರ್ಶವಿರುವ ಮನುಷ್ಯ ಸಾವಿರ ತಪ್ಪುಗಳನ್ನು ಮಾಡಿದರೆ, ಆದರ್ಶವಿಲ್ಲದವನು ಐವತ್ತು ಸಾವಿರ ತಪ್ಪುಗಳನ್ನು ಮಾಡುತ್ತಾನೆ. ಆದಕಾರಣ ಒಂದು ಆದರ್ಶವಿರುವುದು ಮೇಲು. ಈ ಆದರ್ಶ ನಮ್ಮ ಹೃದ್ಗತವಾಗಿ ನಮ್ಮ ರಕ್ತನಾಳಗಳಲ್ಲೆಲ್ಲ ಸಂಚರಿಸಿ ಪ್ರತಿಯೊಂದು ರಕ್ತಕಣವೂ ಈ ಭಾವನೆಯಿಂದ ಅನುರಣಿತ ವಾಗಿ ನಮ್ಮ ದೇಹದ ಅಂಗೋಪಾಂಗಗಳಲೆಲ್ಲ ಸಂಚರಿಸುವ ತನಕ ಅದನ್ನು ನಾವು ಕೇಳಬೇಕು, ಅದನ್ನು ಕುರಿತು ಧ್ಯಾನಿಸಬೇಕು.'

(ಕೃ. ಶ್ರೇ. ೨.೮೮)

ಅತ್ಯಂತ ಅಧಮ ವ್ಯಕ್ತಿಯೂ ಆಧ್ಯಾತ್ಮಿಕ ಆದರ್ಶವನ್ನು ತೆಗೆದುಕೊಂಡರೆ ಕ್ರಮೇಣ ಅವನ ಜೀವನದಲ್ಲಿ ಬದಲಾವಣೆಯುಂಟಾಗಿ ಅವನು ಅತ್ಯುತ್ತಮ ವ್ಯಕ್ತಿಯಾಗಬಹುದು. ಗೀತೆಯಲ್ಲಿ ಶ್ರೀಕೃಷ್ಣನು ಹೇಳುತ್ತಾನೆ:

**ಅಪಿ ಚೇತ್ ಸುದುರಾಚಾರೋ ಭಜತೇ ಮಾಮನನ್ಯಭಾಕ್ ।**
**ಸಾಧುರೇವ ಸ ಮಂತವ್ಯಃ ಸಮ್ಯಕ್ ವ್ಯವಸಿತೋ ಹಿ ಸಃ ॥**
**ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾಂತಿಂ ನಿಗಚ್ಛತಿ ।**

(ಭಗವದ್ಗೀತೆ, ೯.೩೦-೩೧)

'ಅತ್ಯಂತ ದುರಾಚಾರಿಯಾಗಿದ್ದರೂ ಅನನ್ಯ ಭಕ್ತಿಯಿಂದ ನನ್ನನ್ನು ಭಜಿಸಿದರೆ, ಅವನು ಸಾಧುವೆಂದೇ ತಿಳಿಯತಕ್ಕದ್ದು; ಏಕೆಂದರೆ ಅವನು ನಿಶ್ಚಯ ಬುದ್ಧಿಯುಳ್ಳವನಾಗಿರುತ್ತಾನೆ, ಅವನು ಬೇಗನೆ ಧರ್ಮಾತ್ಮ ನಾಗುತ್ತಾನೆ, ಶಾಶ್ವತವಾದ ಶಾಂತಿಯನ್ನು ಹೊಂದುತ್ತಾನೆ.'

ಕೆಲಸ, ಶಿಕ್ಷಣ, ಅನುಭವ ಮತ್ತು ವಾತಾವರಣ ಇವು ವರ್ತಮಾನವನ್ನೂ ಸಂಸ್ಕಾರಗಳು ಭೂತಕಾಲವನ್ನೂ ಆದರ್ಶವು ಭವಿಷ್ಯತ್ ಕಾಲವನ್ನೂ ಸೂಚಿಸುತ್ತವೆ. ಆದ್ದರಿಂದ ವ್ಯಕ್ತಿತ್ವ ನಿರ್ಮಾಣದಲ್ಲಿ ಭೂತ-ವರ್ತಮಾನ-ಭವಿಷ್ಯ ಈ ಮೂರೂ ಪ್ರಧಾನ ಅಂಶಗಳು. (ಮುಂದುವರಿಯುವುದು)

—ಸಂ.

# ಬೆಳಗಾವಿಯಲ್ಲಿ ರಾಮಕೃಷ್ಣ ಮಹಾಸಂಘದ ನೂತನ ಕೇಂದ್ರ



ಸ್ವಾಮಿ ವಿವೇಕಾನಂದರು ತಂಗಿದ್ದ ಶ್ರೀಹರಿಪದ ಮಿತ್ರರ ಗೃಹ

**ಸ್ವಾಮಿ ವಿವೇಕಾನಂದರು** ೧೮೯೨ರಲ್ಲಿ ತಮ್ಮ ಪರಿವ್ರಾಜಕ ದಿನಗಳಲ್ಲಿ ಬೆಳಗಾವಿಗೆ ಭೇಟಿಯಿತ್ತಿದ್ದರು. ಅವರು ಶ್ರೀ ಭಾಟೆ ಮತ್ತು ಶ್ರೀ ಹರಿಪದ ಮಿತ್ರರ ಮನೆಯಲ್ಲಿ ತಂಗಿದ್ದರು. ಅರಣ್ಯಾಧಿಕಾರಿಗಳಾಗಿದ್ದ ಹರಿಪದ ಮಿತ್ರರ ಮನೆಯಲ್ಲಿ ಅವರು ಐದು ದಿನಗಳಿದ್ದರು. ಆ ಮನೆ ಮತ್ತು ಅದಕ್ಕೆ ಸಂಬಂಧಿಸಿದ ಭೂಮಿ ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆಗೆ ಸೇರಿತ್ತು.

ಬೆಳಗಾವಿಯಲ್ಲಿ ಒಂದು ಕೇಂದ್ರವನ್ನು ಸ್ಥಾಪಿಸುವ ಉದ್ದೇಶ ವನ್ನು ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಯುತ ಎಸ್.ಎಂ.ಕೃಷ್ಣ ಅವರಲ್ಲಿ ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ರಂಗನಾಥಾನಂದಜೀಯವರು ಪ್ರಸ್ತಾಪಿಸಿದಾಗ, ಅವರು ಸಂತೋಷದಿಂದ ಒಪ್ಪಿಕೊಂಡು ಆ ಕಟ್ಟಡ ಮತ್ತು ಜಾಗವನ್ನು ಸಂಘಕ್ಕೆ ಬಳುವಳಿಯಾಗಿ ನೀಡಿದರು.

೧.೬.೨೦೦೦ದಂದು ಬೆಳಗ್ಗೆ ೧೧.೩೦ಕ್ಕೆ ಆ ಕಟ್ಟಡವನ್ನು ಸಂಘಕ್ಕೆ ಅಧಿಕೃತವಾಗಿ ಒಪ್ಪಿಸಲಾಯಿತು. ಇದಕ್ಕಾಗಿ ಒಂದು ವಿಶೇಷ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಹಿಂದೆ ವಿಶ್ವಬ್ಯಾಂಕ್‌ನಲ್ಲಿದ್ದ ಶ್ರೀಯುತ ಎಂ.ಎಸ್.ನಂಜುಂಡಯ್ಯನವರು ಮಾತನಾಡಿ, ಈ ಆಸ್ತಿಯನ್ನು ಸಂಘಕ್ಕೆ ನೀಡುವುದರಲ್ಲಿ ಸಹಕರಿಸಿದ ಸರ್ಕಾರಿ ಅಧಿಕಾರಿಗಳೆಲ್ಲರನ್ನು ಅಭಿನಂದಿಸಿದರು. ಆ ಆಸ್ತಿಯನ್ನು ರಾಮಕೃಷ್ಣ ಮಹಾಸಂಘವು ಪಡೆಯುವುದರಲ್ಲಿ ಅವಿರತವಾಗಿ ತಮ್ಮನ್ನು ತೊಡಗಿಸಿಕೊಂಡ ಶ್ರೀ ನಂಜುಂಡಯ್ಯನವರ ಶ್ರಮವನ್ನು ಮರೆಯುವಂತಿಲ್ಲ.

ಸರ್ಕಾರದ ಪರವಾಗಿ ಬೆಳಗಾವಿ ಜಿಲ್ಲಾ ಅರಣ್ಯಾಧಿಕಾರಿಗಳು ಆಸ್ತಿಯ ಹಕ್ಕುಪತ್ರಗಳಿಗೆ ಸಹಿ ಹಾಕಿದರು; ರಾಮಕೃಷ್ಣ ಮಹಾ ಸಂಘದ ಪರವಾಗಿ ಪ್ರಸಕ್ತ ಪೊನ್ನಂಪೇಟೆಯಲ್ಲಿ ಶ್ರೀರಾಮಕೃಷ್ಣ ಶಾರದಾಶ್ರಮದ ಅಧ್ಯಕ್ಷರಾಗಿರುವ ಸ್ವಾಮಿ ಪುರುಷೋತ್ತಮಾ ನಂದಜೀಯವರು ಸಹಿ ಹಾಕಿದರು.

ಪುಣೆಯ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಭೌಮಾ ನಂದಜಿ, ಬೆಂಗಳೂರಿನ ಅಲಸೂರು ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ರಾಘವೇಶಾನಂದಜಿ ಮತ್ತು ಮೈಸೂರು ರಾಮ ಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮವಿದಾನಂದಜಿ ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಬೆಳಗಾವಿಯಲ್ಲಿ 'ರಾಮಕೃಷ್ಣ ವಿವೇಕಾನಂದ ಸೇವಾಶ್ರಮ' ವನ್ನು ನೋಡಿಕೊಳ್ಳುತ್ತಿರುವ ಶ್ರೀ ವರುಣ್ ಸರ್ಕಾರ್ ಅವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸಿದ್ದರು.

ಇದೇ ಸಂದರ್ಭದಲ್ಲಿ ಬೆಳಗಾಮಿನ IMA ಸಭಾಂಗಣದಲ್ಲಿ ಒಂದನೇ ಮತ್ತು ಎರಡನೇ ತಾರೀಖಿನ ಸಂಜೆ ವಿಶೇಷ ಉಪನ್ಯಾಸ ಮತ್ತು ಭಜನೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಸಾರ್ವ ಜನಿಕರು ಬಹು ಸಂಖ್ಯೆಯಲ್ಲಿ ಅದರಲ್ಲಿ ಭಾಗವಹಿಸಿದ್ದರು.